ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ06-12-2025 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ

ನನ್ನ ತಂದೆಯ ಹೆಸರು ವಿಠ್ಠಲ ರಾಮ ಪೈ. ವಾದಿ ನನ್ನ ತಂದೆ . ನಾನು ನನ್ನ ತಂದೆ ವಾದಿಯಾದ ವಿಠ್ಠಲ ರಾಮ ಪೈ ರವರ ಎಲ್ಲಾ ವಾರಸುದಾರರ ಪರವಾಗಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ.

2. ನಾನು ಸಾರಾಬಾಯಿ ಕೆಮಿಕಲ್ಸ ಅಹಮದಾಬಾದ್ ನಲ್ಲಿ ಡಿವಿಶನ್ ಮ್ಯಾನೇಜರ್ ಆಗಿ ಸುಮಾರು 35 ವರ್ಷಗಳಿಂದ ಕೆಲಸ ಮಾಡುತ್ತಿದ್ದೆನು. ನಾನು 2012 ಕ್ಕೆ ನನ್ನ ಊರಿಗೆ ಬಂದಿರುತ್ತೇನೆ. 2012 ರ ವರೆಗೆ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ವಾದಿಯಾದ ನನ್ನ ತಂದೆ ನೋಡಿಕೊಳ್ಳುತ್ತಿದ್ದರು.

3. 2 ನೇ ಪ್ರತಿವಾದಿ ನನಗೆ ದಾಯಾದಿ ಚಿಕ್ಕಪ್ಪ ಆಗಬೇಕು. 2 ನೇ ಪ್ರತಿವಾದಿ ನನ್ನ ತಂದೆಯ ಅಜ್ಜನ ಸಹೋದರನ ಮೊಮ್ಮಗ ಆಗಬೇಕು.

4. 2 ನೇ ಪ್ರತಿವಾದಿಗೆ ಮೂರು ಜನ ಮಕ್ಕಳು ಅವರುಗಳೆಂದರೆ ಅರವಿಂದ ನಾಗೇಶ ಪೈ, ಅಜಿತ ನಾಗೇಶ ಪೈ ಮತ್ತು ಆದರ್ಶ ನಾಗೇಶ ಪೈ ಇರುತ್ತಾರೆ. ಆದರ್ಶ ನಾಗೇಶ ಪೈ ರವರು 1993 ನೇ ಇಸವಿಯಿಂದ ರಾಜಕೀಯದಲ್ಲಿ ಇರುತ್ತಾರೆ ಎಂದರೆ ಸಾಕ್ಷಿ 2010 ರಿಂದ ರಾಜಕೀಯದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ.

5. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ನಮ್ಮ ಕುಟುಂಬದ ಆಸ್ತಿಗೆ ಸಂಬಂದಿಸಿದಂತೆ ಮತ್ತು ಎಲ್ಲಾ ವ್ಯವಹಾರಗಳಿಗೆ ಸಂಬಂದಿಸಿದಂತೆ ಸಂಪೂರ್ಣ ಮಾಹಿತಿ ಇತ್ತು.

6. 2 ನೇ ಪ್ರತಿವಾದಿ ವಿರುದ್ಧ OS No 38/2018, OS No 25/19, OS No 4/2020 ರಂತೆ ದಾವೆಯನ್ನು ಈದೆ ನ್ಯಾಯಾಲಯದಲ್ಲಿ ದಾಖಲಸಿರುತ್ತೇವೆ.

7. ನಾನು 2 ನೇ ಪ್ರತಿವಾದಿಯ ಮಗನಾದ ಆದರ್ಶ ನಾಗೇಶ ಪೈ ರವರ ವಿರುದ್ಧ ಲೊಕಾಯುಕ್ತಕ್ಕೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆದರ್ಶ ನಾಗೇಶ ಪೈರವರು ತನ್ನ ಅಧಿಕಾರ ಅವಧಿಯಲ್ಲಿ ಗ್ರಾಮ ಪಂಚಾಯತದಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಸದರಿ ದೂರುಗಳನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೂರನ್ನು ಲೊಕಾಯುಕ್ತದವರು ಮುಕ್ತಾಯಗೊಳಿಸಿರುತ್ತಾರೆ ಎಂದರೆ ಸರಿ.



8. ಈ ದಾವೆಯನ್ನು ಬಿಳಗಿ ಗ್ರಾಮದ ಸರ್ವೆ 264/2 ಮತ್ತು ಸರ್ವೆ ನಂ 347/1+3 ಗೆ ಸಂಬಂದಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾಸ್ತಿ ನಂ 1 ರ ಆಸ್ತಿಯ ಮೇಲೆ ನಾವು ಯಾವುದೇ ಕ್ಲೇಮ್ ಕೇಳುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾವಾಸ್ತಿ ನಂ 1 ಕ್ಕೆ ಸಂಬಂದಿಸಿದಂತೆ 2002 ರಲ್ಲಿ ವಿಭಾಗ

ಆಗಿರುತ್ತದೆ ಆ ಕಾರಣದಿಂದ ನಾನು ದಾವಾಸ್ತಿ ನಂ 1 ರಲ್ಲಿ ಯಾವುದೇ ಕ್ಲೇಮ್ ನ್ನು ಕೇಳುತ್ತಿಲ್ಲ ಎಂದು ನುಡಿಯುತ್ತಾರೆ.

9. ದಾವಾಸ್ತಿ ನಂ 2 ರಲ್ಲಿ ಮಾತ್ರ ನಾವು ವಿಭಾಗ ಕೋರುತ್ತಿದ್ದೆವೆ. ದಾವಾದ 2 ನೇ ಆಸ್ತಿಗೆ ಸಂಬಂದಿಸಿದಂತೆ ಸಿದ್ದಾಪುರದ ಲ್ಯಾಂಡ್ ಟ್ರಿಬ್ಯೂನಲ್ ಗೆ ಮಂಜೂರಿ ಆದೇಶವನ್ನು ಮರು ಪರಿಶೀಲನೆ ಮಾಡುವಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ದಾವೆ ಸಲ್ಲಿಸುವ ಪೂರ್ವದಲ್ಲಿಯೇ ಸಿದ್ದಾಪುರ ಲ್ಯಾಂಡ್ ಟ್ರಿಬ್ಯುನಲ್ ಗೆ ದಾವಾಸ್ತಿ ನಂ 2 ಕ್ಕೆ ಸಂಬಂದಿಸಿದಂತೆ ಮಂಜೂರಿ ಆದೇಶವನ್ನು ಮರು ಪರಿಶೀಲನೆ ಮಾಡುವಂತೆ ಅರ್ಜಿ ಸಲ್ಲಿಸಿರುತ್ತೇನೆ .

10. ನಮ್ಮ ಮೂಲ ಕುಟುಂಬದ ಆಸ್ತಿಗೆ ಸಂಬಂದಿಸಿದಂತೆ 1941 ರಲ್ಲಿ ಆದ ವಿಭಾಗ ಪತ್ರ ನನ್ನ ಬಳಿ ಇರುವುದಿಲ್ಲ. ಸದರಿ ವಿಭಾಗವನ್ನು ನಾನು ಈ ದಾವೆಯಲ್ಲಿ ಪ್ರಶ್ನಿಸಿರುವುದಿಲ್ಲ.

11. ದಾವಾಸ್ತಿ ನಂ 1 ಗೆ ಸಂಬಂದಿಸಿದಂತೆ ಎಪ್ರಿಲ್ 2002 ರಲ್ಲಿ ವಿಭಾಗ ಆಗಿರುತ್ತದೆ.

12. ನಮ್ಮ ಕುಟುಂಬದಲ್ಲಿ ಎಪ್ರಿಲ್ 2002 ರಲ್ಲಿ ದಾವಾಸ್ತಿ ನಂ 1 ಕ್ಕೆ ಸಂಬಂದಿಸಿದಂತೆ ಆದ ವಿಭಾಗವನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

13. OS No 25/2019 ರ ಪ್ಯಾರಾ ನಂ. 7 ರಲ್ಲಿ ನನ್ನ ಕುಟುಂಬದಲ್ಲಿ ಆದ ದಿಃ 15-04-2002 ರಲ್ಲಿ ಆದ ವಿಭಾಗದ ಬಗ್ಗೆ ಸ್ಪಷ್ಟವಾಗಿ ನಮೂದಿಸಿರುತ್ತೇನೆ ಎಂದರೆ ಸರಿ. ದಿಃ 15-04-2002 ರಲ್ಲಿ ನಮ್ಮ ಕುಟುಂಬದಲ್ಲಿ ಆದ ವಿಭಾಗ ನೊಂದಾಯಿತ ವಿಭಾಗ ಆಗಿರುತ್ತದೆ.

14. 2002 ರಲ್ಲಿ ದಾವಾಸ್ತಿ ನಂ 2 ಕ್ಕೆ ಸಂಬಂದಿಸಿದಂತೆ ವಿಭಾಗವನ್ನು ಕೇಳಿಲ್ಲ ಆ ಕಾರಣದಿಂದ ದಿಃ 15-04-2002 ರಲ್ಲಿ ನಮ್ಮ ಕುಟುಬಂದಲ್ಲಿ ಆದ ವಿಭಾಗದಲ್ಲಿ ಈ ದಾವೆಯ 2 ನೇ ಆಸ್ತಿ ಸೇರಿಸಿಲ್ಲ.

15. ದಾವಾಸ್ತಿಯನ್ನು ಹೋರತುಪಡಿಸಿ ನಮ್ಮ ಕುಟುಂಬಕ್ಕೆ ಸಾಕಷ್ಟು ಇತರೆ ಆಸ್ತಿಗಳು ಇರುತ್ತವೆ ಎಂದರೆ ಸರಿ. ದಾವಾಸ್ತಿಯನ್ನು ಹೋರತುಪಡಿಸಿ ನಮ್ಮ ಕುಟುಂಬಕ್ಕೆ 25 ಆಸ್ತಿಗಳು ಇರುತ್ತವೆ. ದಾವಾಸ್ತಿಯನ್ನು ಹೋರತುಪಡಿಸಿ, ನಮ್ಮ ಕುಟುಂಬದ ಎಲ್ಲಾ ಆಸ್ತಿಗಳು 1941 ರಲ್ಲಿ ವಿಭಾಗ ಆಗಿರುತ್ತದೆ. ನಮ್ಮ ಮೂಲ ಕುಟುಂಬದಲ್ಲಿ 1941 ರಲ್ಲಿ ವಿಭಾಗ ಆದ ನಂತರ ಸದರಿ ವಿಭಾಗದ ಪ್ರಕಾರ ಆಸ್ತಿಯ ವೈವಾಟ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.



16. ನಮ್ಮ ಮೂಲ ಕುಟುಂಬದಲ್ಲಿ 1941 ರಲ್ಲಿ ವಿಭಾಗ ಆಸ್ತಿಗಳಿಗೆ ಸಂಬಂದಿಸಿಂತೆ ನಾವು ಮತ್ತು ಪ್ರತಿವಾದಿಗಳು ನಮ್ಮ ಮೂಲ ಕುಟುಂಬದ ಎಲ್ಲಾ ಆಸ್ತಿಗಳಿಗೆ ಮಾಲೀಕರಾಗಿರುತ್ತೇವೆ.

17. ದಾವಾಸ್ತಿ ನಂ 2 ರ ಆಸ್ತಿ ಮೂಲತಃ ಗೇಣಿ ಆಸ್ತಿ ಆಗಿರುತ್ತದೆ. ಸಾಕ್ಷಿ ಮುಂದುವರೆದು 1943 ರ ವರೆಗೆ ದಾವಾಸ್ತಿ ನಂ 2 ರ ಆಸ್ತಿ ಗೇಣಿ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. 1943 ರ ನಂತರ ದಾವಾದ 2 ನೇ ಆಸ್ತಿಯನ್ನು ನಮ್ಮ ಕುಟುಂಬಕ್ಕೆ ವಾಪಸ್ ನೀಡಿರುತ್ತಾರೆ. ಶ್ರೀನಿವಾಸ್ ವಾಮನ್ ಪ್ರಭು ರವರಿಗೆ ದಾವಾದ 2 ನೇ ಆಸ್ತಿ ಗೇಣಿ ಆಸ್ತಿ ಆಗಿರುವ ಬಗ್ಗೆ 1934 ರಿಂದ ದಾಖಲೆಗಳಲ್ಲಿ ನಮೂದಾಗಿರುತ್ತದೆ.

18. ಸದರಿ ಶ್ರೀನಿವಾಸ ವಾಮನ್ ಪ್ರಭು ರವರು ದಾವಾದ 2 ನೇ ಆಸ್ತಿಯನ್ನು ನಮಗೆ ವಾಪಸ್ ನೀಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು 1943 ರ ನಂತರ ನಮ್ಮ ಕುಟುಂಬದ 5 ಜನರೂ ಸಾಗುವಳಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ.

19. ನಾನು 1960 ರಲ್ಲಿ ಜನಿಸಿರುತ್ತೇನೆ. 1943 ರಿಂದ 1960 ರ ವರೆಗೆ ನಮ್ಮ ಕುಟುಂಬದಲ್ಲಿ ಏನೇನು ವ್ಯವಹಾರಗಳು ಆಗಿರುತ್ತದೆ ಎಂದು ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ.

20. ದಾವಾದ 2 ನೇ ಆಸ್ತಿಗೆ ಸಂಬಂದಿಸಿದಂತೆ 1943 ರಿಂದ 1974-1975 ರ ವರೆಗಿನ ಕೈ ಬರಹದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುವುದಿಲ್ಲ.

21. ದಾವಾದ 2 ನೇ ಆಸ್ತಿ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆ ಆದ ಬಗ್ಗೆ 1980 ರಲ್ಲಿ ದಾಖಲಾಗಿದ್ದು ಆ ಬಗ್ಗೆ ನನಗೆ 2013 ರಲ್ಲಿ ನನಗೆ ತಿಳಿದುಬಂದಿರುತ್ತದೆ.

22. ಸಾಮಾನ್ಯವಾಗಿ ಯಾರು ಕೃಷಿ ಜಮೀನಿನಲ್ಲಿ ಕೆಲಸ ಮಾಡುತ್ತಾರೊ ಅವರಿಗೆ ಭೂನ್ಯಾಯ ಮಂಡಳಿ ಜಮೀನು ಮಂಜೂರು ಮಾಡುತ್ತಾರೆ ಎಂದರೆ ಸರಿ. ಕುಟುಂಬದ ಸದಸ್ಯನೇ ಪಾರ್ಮ ನಂ 7 ನ್ನು ಭರ್ತಿ ಮಾಡಿ ಹಾಜರುಪಡಿಸಿದರೆ ಸದರಿ ಜಮೀನುಗಳು ಮಂಜೂರಾಗುತ್ತದೆ ಎಂದು ನುಡಿಯುತ್ತಾರೆ.

23. ದಾವಾದ 2 ನೇ ಆಸ್ತಿಗೆ ಸಂಬಂದಿಸಿದಂತೆ ಸಿದ್ದಾಪುರದ ಭೂಸುಧಾರಣಾ ಮಂಡಳಿ 2 ನೇ ಪ್ರತಿವಾದಿಗೆ ದಾವಾದ 2 ನೇ ಆಸ್ತಿ ಮಂಜೂರಿ ಮಾಡಿದ ನಂತರ ನನ್ನ ತಂದೆ 1980 ರಲ್ಲಿ ವಿಚಾರಿಸಿರುತ್ತಾರೆ .

24. ಈ ದಾವೆಯ 1 ನೇ ಪ್ರತಿವಾದಿಯನ್ನು OS No 25/2019 ರಲ್ಲಿ 2 ನೇ ವಾದಿಯನ್ನಾಗಿ ಸೇರಿಸಿಕೊಂಡಿರುತ್ತೇನೆ ಎಂದರೆ ಸರಿ. ನಾನು 1 ನೇ ಪ್ರತಿವಾದಿಯೊಂದಿಗೆ



ಚೆನ್ನಾಗಿದ್ದೆನು. 1 ನೇ ಪ್ರತಿವಾದಿ ಸದರಿ ದಾವಾದ 2 ನೇ ಆಸ್ತಿಗೆ ಸಂಬಂದಿಸಿದಂತೆ ಮಂಜೂರಾದ ಬಗ್ಗೆ ವಿಚಾರಿಸಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ.

25. ಭೂಸುಧಾರಣೆ ಕಾಯ್ದಿ ಬರುವ ಪೂರ್ವದಲ್ಲಿಯೇ ದಾವಾದ 2 ನೇ ಆಸ್ತಿಗೆ 2 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಕುಟುಬಂದವರು ಸಹ ಸಾಗುವಳಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ.

26. ನಿ.ಪಿ-5 ರಲ್ಲಿ ಕಾಲಂ ನಂ 12 ರಲ್ಲಿ 2 ನೇ ಪ್ರತಿವಾದಿಯ ಹೆಸರು ಸಾಗುವಳಿದಾರರ ಕಾಲಂ ನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಬಗ್ಗೆ 2 ನೇ ಪ್ರತಿವಾದಿ ತನ್ನ ಹೆಸರನ್ನು ಯಾವಾಗ ಸೇರಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

27. ನಿ.ಪಿ-5 ರ ಪ್ರಕಾರ 1964 ರಿಂದ 1981 ರ ವರೆಗೆ ಪಹಣಿ ಪತ್ರಿಕೆಗಳ ಕಾಲಂ ನಂ 12 ರಲ್ಲಿ 2 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ.

28. ದಾವಾದ 2 ನೇ ಆಸ್ತಿ ಮಾಲ್ಕಿ ಆಸ್ತಿ ಎಂದುತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**